ಮೂಲ ದಾವಾ ಸಂಖ್ಯೆ 3/2019

ಪಿ.ಡಬ್ಲ್ಯೂ–1

**ದಿಃ 29.11.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಬಿ ಆರ್ ವಕೀಲರಿಂದಃ–**

ದಿನಾಂಕ 17.02.2006 ರಂದು ಸೌಭಾಗ್ಯಮ್ಮ ರವರು ನನ್ನ ಹಾಗೂ ನನ್ನ ಸಹೋದರರ ಪರವಾಗಿ ಬರೆದ ವಿಲ್ ನಾಮೆಯನ್ನು ಹಾಜರುಪಡಿಸಿದ್ದೇನೆ ಅದನ್ನು ರುಜುವಾತುಪಡಿಸುವ ಹೊಣೆಗಾರಿಕೆಯ ಮೇಲೆ ನಿ ಪಿ 17 ಎಂದು, ಸೌಭಾಗ್ಯಮ್ಮ ರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 18 ಎಂದು, ಗ್ರಾಮ ಪಂಚಾಯತಿ ತೌಡೂರು ರವರು ನಿವೇಶನ ಸಂಖ್ಯೆ 51 ಕ್ಕೆ ಸಂಬಂಧಪಟ್ಟಂತೆ ನೀಡಿರುವ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 19 ಎಂದು, ದಿನಾಂಕ 10.02.1980 ರಂದು ದೇವಿರಮ್ಮ, ವೀರಯ್ಯ ತಂದೆ ಹಂಪಯ್ಯ, ಚನ್ನಬಸ್ಸಯ್ಯ ಇವರುಗಳ ನಡುವೆ ಆಗಿರುವಂತಹ ನೋಂದಾಯಿತವಲ್ಲದ ಪಾಲು ಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ತಕರಾರು ಮಾಡಿರುತ್ತಾರೆ. ತಕರಾರಿಗೆ ಒಳಪಟ್ಟು ಅದನ್ನು ನಿ ಪಿ 20 ಎಂದು ಗುರುತಿಸಲಾಯಿತು.

**(ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.